ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2410

ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 26.03.2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವತಿಯಿಂದ ಚಲಾಯಿಸುತ್ತಿರುವ ಕೆಲವು ಬಸ್ಸುಗಳು ತಗಡಿನ ಡಬ್ಬವಿದ್ದು, ಇಂಜಿನಿಗಿಂತ ವಿಪರೀತ ಶಬ್ದ ಬಸ್ಸಿನ ಇತರ ವಸ್ತುಗಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಎಲ್ಲಾ ಬಸ್ಸುಗಳನ್ನು ಭೌತಿಕವಾಗಿ ಮತ್ತು ತಾಂತ್ರಿಕವಾಗಿ ಸುಸ್ಥಿಯಲ್ಲಿರಿಸಲಾಗಿದ್ದು, ಅಲ್ಲದೇ, ವಾಹನ ರಹದಾರಿ ನವೀಕರಣ ಸಂದರ್ಭದಲ್ಲಿ ಪ್ರತಿ ವಾಹನವನ್ನು ಪರಿಶೀಲಿಸಿ ವಯೋಮಾನ ಮತ್ತು ದೋಷದ ತೀವ್ರತೆಗೆ ತಕ್ಕಂತೆ ಹೆಚ್ಚುವರಿ ಕವಚ ದುರಸ್ಥಿ ಕಾರ್ಯಗಳಿಗೆ ಒಳಪಡಿಸಲಾಗುತ್ತಿದೆ.
ಆ)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಪ್ರಸ್ತುತವಾಗಿ ಎಷ್ಟು ಸಂಸ್ಥೆಗಳಿಂದ ಬಸ್ಸುಗಳನ್ನು ಬಾಡಿಗೆ, ಗುತ್ತಿಗೆ ಅಥವಾ ಇತರೆ ರೀತಿಯಲ್ಲಿ ಯಾವ ಷರತ್ತುಗಳ ಅನ್ವಯ ಪಡೆಯಲಾಗುತ್ತಿದೆ; (ವಿವರ ಒದಗಿಸುವುದು)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪ್ರಸ್ತುತ ಯಾವುದೇ ಸಂಸ್ಥೆಗಳಿಂದಲೂ ಬಸ್ಸುಗಳನ್ನು ಬಾಡಿಗೆ, ಗುತ್ತಿಗೆ ಅಥವಾ ಇತರೆ ರೀತಿಯಲ್ಲಿ ಪಡೆದಿರುವುದಿಲ್ಲ.
ಇ)	ಕೇವಲ ತಮ್ಮ ಲಾಭಾಂಶದ ದೃಷ್ಟಿಯಿಂದ ಪ್ರಯಾಣಿಕರ ಹಿತಾಸಕ್ತಿಗೆ ವಿರುದ್ಧವಾಗಿ ಬಸ್ಸುಗಳನ್ನು ಸಂಸ್ಥಗೆ ನೀಡುತ್ತಿರುವವರ ವಿರುದ್ಧ ಇಲಾಖೆ ಕೈಗೊಂಡ ಕ್ರಮವೇನು;	
ಈ)	ಕಳಪೆ ವಸ್ತುಗಳನ್ನು ಬಳಸಿ ಬಸ್ಸುಗಳನ್ನು ಸಿದ್ದಪಡಿಸಿ ಸಂಸ್ಥೆಗೆ ನೀಡುತ್ತಿರುವವರ ಹಾಗೂ ಸಂಸ್ಥೆಯಲ್ಲಿನ ಭ್ರಷ್ಟರ ವಿರುದ್ದ ಸರ್ಕಾರ ಕೈಗೊಂಡ ಕ್ರಮಗಳೇನು?	ಕಳಪೆ ವಸ್ತುಗಳನ್ನು ಬಳಸಿ ಸಿದ್ದಪಡಿಸಿರುವ ಯಾವುದೇ ಬಸ್ಸುಗಳು ಸಂಸ್ಥೆಯಲ್ಲಿರುವುದಿಲ್ಲ.

ಸಂಖ್ಯೆ: ಟಿಡಿ 161 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

<u>ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2410ಕ್ಕೆ ಪೂರಕ ಟಿಪ್ಪಣಿ</u>

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಎಲ್ಲಾ ಬಸ್ಸುಗಳನ್ನು ಭೌತಿಕವಾಗಿ ಮತ್ತು ತಾಂತ್ರಿಕವಾಗಿ ಸುಸ್ಥಿಯುಲ್ಲಿರಿಸಲಾಗಿದ್ದು, ಅಲ್ಲದೇ, ವಾಹನ ರಹದಾರಿ ನವೀಕರಣ ಸಚಿದರ್ಭದಲ್ಲಿ ಪ್ರತಿ ವಾಹನವನ್ನು ಪರಿಶೀಲಿಸಿ ವಯೋಮಾನ ಮತ್ತು ದೋಷದ ತೀವ್ರತೆಗೆ ತಕ್ಕಂತೆ ಹೆಚ್ಚುವರಿ ಕವಚ, ದುರಸ್ಥಿ ಕಾರ್ಯಗಳಿಗೆ ಒಳಪಡಿಸಲಾಗುತ್ತಿದೆ. ರಾಜ್ಯ ಸಾರಿಗೆ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರವು 2010ನೇ ಇಸವಿಯಲ್ಲಿ ಒದಗಿಸಿರುವ ಸವಕಳಿ ಮಾರ್ಗಸ್ರಚಿಯ ಆಧಾರದ ಮೇಲೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿಯೇ ವಾಹನಗಳನ್ನು ನಿಷ್ಕ್ರಿಯೆಗೊಳಿಸಲು ನಿಯಮಾವಳಿ ರಚಿಸಿಕೊಂಡಿರುತ್ತದೆ. ಅದರಂತೆ "8.5 ಲಕ್ಷ ಕಿ.ಮೀ.ಗಳು ಕ್ರಮಿಸಿರುವ ಅಥವಾ 11 ವರ್ಷಗಳ ವಯೋಮಿತಿ ಪೂರೈಸಿರುವ (ಇವುಗಳಲ್ಲಿ ಯಾವುದು ಮೊದಲೋ) ಅಚಿತಹ ಹವಾನಿಯಂತ್ರಿತವಲ್ಲದ ವಾಹನಗಳನ್ನು ಅವುಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಯ ಆಧಾರದ ಮೇಲೆ ನಿಷ್ಕ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಪ್ರಸ್ತುತವಾಗಿ ಯಾವುದೇ ಸಂಸ್ಥೆಗಳಿಂದಲೂ ಬಸ್ಸಗಳನ್ನು ಬಾಡಿಗೆ, ಗುತ್ತಿಗೆ ಅಥವಾ ಇತರೆ ರೀತಿಯಲ್ಲಿ ಪಡೆದಿರುವುದಿಲ್ಲ. ಕಳಪೆ ವಸ್ತುಗಳನ್ನು ಬಳಸಿ ಸಿದ್ದಪಡಿಸಿರುವ ಯಾವುದೇ ಬಸ್ಸಗಳು ಸಂಸ್ಥೆಯಲ್ಲಿ ಇರುವುದಿಲ್ಲ.

* * * * *